# ದೈತ್ಯ ಪೈಪೋಟಿ



**ಈ** ಸಲದ ದೀಪಾವಳಿ ಹಬ್ಬದ ವೇಳೆಗೆ ಬಾಲಿವುಡ್‌ನಲ್ಲೊಂದು 'ದೈತ್ಯ ಸಂಘರ್ಷ' ನಡೆಯುವುದು ಖಾತ್ರಿಯಾಗಿದೆ. ಯಶ್ ಚೋಪ್ರಾ ನಿರ್ದೇಶನದ ಕೊನೆಯ ಚಿತ್ರ (ಹಾಗೆಂದು ಅವರೇ ಪ್ರಕಟಿಸಿದ್ದಾರೆ) 'ಜಬ್ ತಕ್ ಹೈ ಜಾನ್' ಮತ್ತು ಅಜಯ್ ದೇವಗನ್ ನಟಿಸಿರುವ 'ಸನ್ ಆಫ್ ಸರ್ದಾರ್' ಎರಡೂ ಒಟ್ಟಿಗೇ ಬಿಡುಗಡೆಯಾಗಲಿವೆ. ಯಶ್ ಚೋಪ್ರಾರ ಚಿತ್ರದಲ್ಲಿ ಶಾರೂಕ್ ಖಾನ್ – ಕತ್ರೀನಾ ಕೈಫ್ ಅವರ ಸೂಪರ್‌ಹಿಟ್ ಜೋಡಿ ಇದ್ದರೆ, ಅಜಯ್ ಜತೆಗೆ ಸೋನಾಕ್ಷಿ ಸಿನ್ಹಾ ಜೋಡಿಯಾಗಿದ್ದಾರೆ. ಈ ಎರಡೂ ಬಿಗ್‌ಬಜೆಟ್ ಚಿತ್ರಗಳು ಬಿಡುಗಡೆಯಾದ ಮೊದಲ ಒಂದೆರಡು ವಾರಗಳಲ್ಲಿ 150–160 ಕೋಟಿ ರೂಪಾಯಿ ಬಾಚಿಕೊಳ್ಳಬೇಕೆಂಬ ಗುರಿಯೊಂದಿಗೆ ಪ್ರಚಾರದ ಆಖಾಡಕ್ಕೆ ಈಗಾಗಲೆ ಇಳಿದಿವೆ. ಎರಡೂ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ತೀವ್ರ ಕುತೂಹಲ ಹುಟ್ಟಿಸಿರುವುದರಿಂದ ಈ ಅವಧಿಯ ಹಿಂದೆ– ಮುಂದೆ ಬಿಡುಗಡೆ ಆಗಬೇಕಿರುವ ಬೇರೆ ಚಿತ್ರಗಳ ನಿರ್ಮಾಪಕರು ಕಂಗಾಲಾಗಿದ್ದಾರೆ.

ಶಾರೂಕ್– ಕತ್ರೀನಾ ಜೋಡಿಯ ಜತೆಗೆ ಹೆಚ್ಚುವರಿಯಾಗಿ ಅನೂಷ್ಕಾ ಶರ್ಮಾ ಕೂಡಾ ನಟಿಸಿದ್ದಾಳೆ. ಟೀವಿ ಯಲ್ಲಿ ಜನಪ್ರಿಯವಾಗಿರುವ 'ಕೌನ್ ಬನೇಗಾ ಕರೋಡ್‌ಪತಿ'ಯಲ್ಲಿ ಅಮಿತಾಭ್ ಜತೆ ಕಾಣಿಸಿಕೊಂಡ ಶಾರೂಕ್– ಕತ್ರೀನಾ ಜೋಡಿ ಚಿತ್ರಕ್ಕೆ ಭರ್ಜರಿ ಪ್ರಚಾರವನ್ನೂ ಪಡೆದುಕೊಂಡಿದೆ. ಇದೇ ವೇಳೆ 'ಸನ್ ಆಫ್ ಸರ್ದಾರ್' ಚಿತ್ರದ ಪ್ರಚಾರದ ವೇಳೆ ಐಟಂ ಸಾಂಗ್‌ನಲ್ಲಿ ಸಲ್ಮಾನ್ ಖಾನ್ ಕಾಣಿಸಿಕೊಂಡಿದ್ದು, ಶಾರೂಕ್ ಪಾಳೆಯದ ಪ್ರಚಾರಕ್ಕೆ ಸೆಡ್ಡು ಹೊಡೆದಿದೆ. ಒಟ್ಟಾರೆ ಬಾಲಿವುಡ್ ಇಬ್ಬರು ಸೂಪರ್ ಸ್ಟಾರ್‌ಗಳ ನಡುವಣ ಪೈಪೋಟಿ ಚಿತ್ರರಸಿಕರಲ್ಲಿ ತೀವ್ರ ಕುತೂಹಲ ಹುಟ್ಟಿಸಿದೆ.

■ ಬಿಂದು






Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65